# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಪಶ್ಚಿಮ ವಲಯ, ಶ್ರೀರಾಮಮಂದಿರ ಉಪವಿಭಾಗ

### ವಾರ್ಡ್ ನಂ.98 : ಪ್ರಕಾಶ್ ನಗರ

**ದಿನಾಂಕ: 05.06.2021 ರಂದು ಮಧ್ಯಾಹ್ನ 3.00 ಗಂಟೆಗೆ ಶ್ರೀ ಎಂ.ಬಿ.ನಾಗರಾಜು, ನೋಡಲ್ ಅಧಿಕಾರಿ, ವಾರ್ಡ್ 98 ರವರ ಅಧ್ಯಕ್ಷತೆಯಲ್ಲಿ ಸಹಾಯಕ ಅಭಿಯಂತರರು, ವಾರ್ಡ್ 98ರ ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳು:**

**ಸಭೆಯಲ್ಲಿ ಹಾಜರಿದ್ದವರು:**

| ಕ್ರಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ಎಂ.ಬಿ.ನಾಗರಾಜು | ನೋಡಲ್ ಅಧಿಕಾರಿ-ವಾರ್ಡ್ 98 |
| 2 | ಶ್ರೀ ಮಂಜುನಾಥ್ ಡಿ ಎಸ್ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಹಾಗೂ ಸಂಚಾಲಕರು-ವಾರ್ಡ್ 98 |
| 3 | ಡಾ.ಶೀಲಾ | ಆರೋಗ್ಯ ಅಧಿಕಾರಿ, PHC ಪ್ರಕಾಶ್ ನಗರ |
| 4 | ಕವಿತ ಬಿ.ಎಲ್ | ಶುಶ್ರೂಷಕಿ, PHC ಪ್ರಕಾಶ್ ನಗರ |
| 5 | ರಮೇಶ್ ಎಂ | ಕಂದಾಯ ವಸೂಲಿಗಾರರು |
| 6 | ಆರ್ ನರಸಿಂಹ | ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 7 | ಎಂ.ಡಿ.ಶ್ರೀಧರ್ | ಎಫ್.ಡಿ.ಎ |
| 8 | ಪದ್ಮನಾಭ ಎಸ್.ವಿ | ಎನ್.ಜಿ.ಓ |
| 9 | ಜೆ.ಶ್ರೀನಿವಾಸ್ | ಎನ್.ಜಿ.ಓ |
| 10 | ಬಿ.ಎಸ್.ಪ್ರವೀಣ್ ಕುಮಾರ್ | ಸ್ಥಳೀಯ ನಾಗರೀಕರ ಕಲ್ಯಾಣ ಸಂಘ |

:ನಡಾವಳಿಯ ವರದಿ:

ಸದಸ್ಯ ಕಾರ್ಯದರ್ಶಿಗಳಾದ ಶ್ರೀ ಮಂಜುನಾಥ್ ಡಿ.ಎಸ್ ಮಾತನಾಡುತ್ತಾ ಸಭೆಗೆ ಹಾಜರಾದ ನೋಡಲ್‌ಅಧಿಕಾರಿ ಹಾಗೂ ಪಾಲಿಕೆಯ ಅಧಿಕಾರಿಗಳು/ನೌಕರರಿಗೆ ಮತ್ತು ವಾರ್ಡ್ ಕಮಿಟಿ ಸದಸ್ಯರಿಗೆ ಸ್ವಾಗತ ಕೋರಿದರು.

- **<u>ಕೋವಿಡ್-19, ಸಾಂಕ್ರಾಮಿಕ ರೋಗದ ಬಗ್ಗೆ</u>**
  - ಶ್ರೀ ಎಂ.ಬಿ ನಾಗರಾಜು, ನೋಡಲ್ ಅಧಿಕಾರಿ-ವಾರ್ಡ್ ನಂ.98, ರವರು ಮಾತನಾಡಿ, ಕೋವಿಡ್-19 ಸಾಂಕ್ರಾಮಿಕವನ್ನು ತಡೆಗಟ್ಟುವ ನಿಟ್ಟಿನಲ್ಲಿ ವಾರ್ ರೂಂ ಮತ್ತು Triage Center ಗಳನ್ನು ಸ್ಥಾಪಿಸಿದ್ದು, ಹೋಮ್ ಐಸೋಲೇಷನ್ ಆಗಲು ಸ್ಥಳವಿಲ್ಲದವರನ್ನು ಸೆಂಟರ್‌ಗೆ ಕಳುಹಿಸಲು ಸೂಚಿಸಿದರು ಹಾಗೂ ಒಪ್ಪದಿದ್ದಲ್ಲಿ ಮನವೊಲಿಸಲು ಸೂಚಿಸಿದರು ಹಾಗೂ ಅವಶ್ಯಕವಿಲ್ಲದ ಅಂಗಡಿಗಳು ತೆರೆಯುತ್ತಿರುವುದು ಕಂಡುಬಂದಿದ್ದು, ಅಂಗಡಿಗಳನ್ನು ಮುಚ್ಚಿಸಲು ಸೂಚಿಸಲಾಯಿತು. ಕಡ್ಡಾಯವಾಗಿ ಮಾಸ್ಕ್ ಧರಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಲಾಯಿತು.

- ಸಭೆಯಲ್ಲಿ ಇದುವರೆಗಿನ ಲಸಿಕಾಕರಣ ಹಾಗೂ ಕೋವಿಡ್ ತಪಾಸಣೆಗಾಗಿ ಸಂಬಂಧಿಸಿದ ವಿವರಗಳನ್ನು ಸಭೆಯಲ್ಲಿ ತಿಳಿಸಲಾಯಿತು. ಡಾ.ಸುಷ್ಮಿತಾ ರವರು ಹೋಮ್ ಐಸೋಲೇಷನ್ ಸಾರ್ವಜನಿಕರು ಆರೋಗ್ಯವನ್ನು ಪರಿಶೀಲಿಸಿ Color code ಅನ್ವಯ ವಲಯದ ನಿಯಂತ್ರಣ ಕೇಂದ್ರದಿಂದ ಆಸ್ಪತ್ರೆ, ಬೆಡ್ ಪಡೆಯುವ ಬಗ್ಗೆ ಕಾರ್ಯನಿರ್ವಹಿಸುತ್ತಿರುವುದಾಗೀ ತಿಳಿಸಿದರು.
- Identifying of Hotspot:- ವಾರ್ಡ್ ವ್ಯಾಪ್ತಿಯಲ್ಲಿರುವ ಹಾಟ್ ಸ್ಪಾಟ್‌ಗಳಲ್ಲಿ ಕೋವಿಡ್-19 ಹರಡುವಿಕೆಯನ್ನು ನಿಯಂತ್ರಿಸಲು ಮೈಕ್ರೋ ಪ್ಲಾನ್ ರೂಪಿಸಿ ಅನುಷ್ಠಾನಗೊಳಿಸಬೇಕಾಗಿದ್ದು, Testing team ರವರಿಂದ ಅರಿವು ಮೂಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ವೈದ್ಯಾಧಿಕಾರಿರವರಿಗೆ ಸೂಚಿಸಲಾಯಿತು.
- ಸರ್ಕಾರ/ ಬಿಬಿಎಂಪಿ ಯಿಂದ ಕಾಲಕಾಲಕ್ಕೆ ಹೊರಡಿಸಲಾಗುವ ಸೂಚನೆಗಳು/ ಮಾರ್ಗಸೂಚಿಗಳನ್ವಯ ಹಾಗೂ ವಲಯ ಕಛೇರಿಯ ಆದೇಶಾನುಸಾರ ಆದ್ಯತೆ ಮೇರೆಗೆ ಕ್ರಮವಹಿಸಿ ಕಾರ್ಯನಿರ್ವಹಿಸಲು ಎಲ್ಲಾ ಸದಸ್ಯರಿಗೆ ಸೂಚಿಸಲಾಯಿತು.

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿ/ನೌಕರರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆಯೂ ಈ ಸಭೆಗಳಲ್ಲಿ ಪೂರ್ವತಯಾರಿಯೊಂದಿಗೆ ಪಾಲ್ಗೊಂಡು ಕೋವಿಡ್-19 ಸಾಂಕ್ರಾಮಿಕವನ್ನು ವಾರ್ಡ್ ಮಟ್ಟದಲ್ಲಿಯೇ ಪರಿಹರಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿ ಸಹಕಾರ ನೀಡಬೇಕೆಂದು ಮನವಿ ಮಾಡಿದರು.

➢ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದ ಶ್ರೀ ಮಂಜುನಾಥ್ ಡಿ ಎಸ್ ರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳು/ನೌಕರರಿಗೂ ವಂದನೆಯನ್ನು ತಿಳಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ-ವಾರ್ಡ್ 98 ಹಾಗೂ
ಸಹಾಯಕ ಅಭಿಯಂತರರು,

(ಶ್ರೀ ಎಂ.ಬಿ.ನಾಗರಾಜು)
ನೋಡಲ್ ಅಧಿಕಾರಿ ವಾರ್ಡ್-98

ಪ್ರತಿಯನ್ನು:

1) ಮಾನ್ಯ ವಲಯ ಆಯುಕ್ತರು, ಪಶ್ಚಿಮ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
2) ಜಂಟಿ ಆಯುಕ್ತರು, ಪಶ್ಚಿಮ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
3) ಕಾರ್ಯಪಾಲಕ ಅಭಿಯಂತರರು (ರಾಜಾಜಿನಗರ ವಿಭಾಗ) ರವರ ಮಾಹಿತಿಗಾಗಿ ಕಳುಹಿಸಿದೆ.
4) ಸಹಾಯಕ ಕಾರ್ಯಪಾಲಕ ಅಭಿಯಂತರರು (ಶ್ರೀರಾಮಮಂದಿರ) ರವರ ಮಾಹಿತಿಗಾಗಿ ಕಳುಹಿಸಿದೆ.
5) ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.98 ರವರ ಮಾಹಿತಿಗಾಗಿ
6) ಸಹಾಯಕ ಅಭಿಯಂತರರು (ವಿದ್ಯುತ್ ಬೆಸ್ಕಾಂ) ರವರ ಮಾಹಿತಿಗಾಗಿ
7) ಸಹಾಯಕ ಅಭಿಯಂತರರು (ವಿದ್ಯುತ್ (ಬೀದಿದೀಪ) ಬಿಬಿಎಂಪಿ ರವರ ಮಾಹಿತಿಗಾಗಿ ಸೂಕ್ತ ಕ್ರಮಕ್ಕಾಗಿ
8) ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ರಾಜಾಜಿನಗರ ಪೋಲೀಸ್ ಠಾಣೆ ರವರ ಮಾಹಿತಿಗಾಗಿ
9) ಕಛೇರಿ ಕಡತಕ್ಕೆ